ಓ ಎಸ್ ನಂಃ 200-17
ಡಿ ಡಬ್ಲ್ಯೂ ಃ 1

ದಿಃ 04-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಟಿ ಎಸ್ ಆರ್ ವಕೀಲರಿಂದ

14. ನನಗೆ ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿದ್ದು ಅದರ ವಿಸ್ತೀರ್ಣ 9 3/4 ಗುಂಟೆ ಇರುತ್ತದೆ. ದಾವಾ ಆಸ್ತಿಯ ಸರ್ವೆ ನಂ 62/1 ಎ ಇರುತ್ತದೆ. ಸರ್ವೆ ನಂ 62 ರ ಒಟ್ಟು ವಿಸ್ತೀರ್ಣ 12 ಎಕರೆ 01 ಗುಂಟೆ ಇರುತ್ತದೆ. ಸರ್ವೆ ನಂ 62 ಮೂಲತಃ ಪುಟ್ಟರಂಗಯ್ಯರವರಿಗೆ ಸೇರಿರುತ್ತದೆ. ಸರ್ವೆ ನಂ 62 ಹಿಸ್ಸಾ ಪೋಡಿಯಾದಾಗ ಸರ್ವೆ ನಂ 62/1 ಕ್ಕೆ 4 ಎಕರೆ 13 ಗುಂಟೆ ಜಮೀನನ್ನು ಕೂಡಿಸಿರುತ್ತಾರೆ. ಆಗ ಸದರಿ 4 ಎಕರೆ 13 ಗುಂಟೆ ಜಮೀನು ಯಾರ ಒಡೆತನದಲ್ಲಿತ್ತು ನೆನಪಿಲ್ಲ. ಸರ್ವೆ ನಂ 62 ರಲ್ಲಿ ಸರ್ವೆ ನಂ 62/1 ನ್ನು ಹೊರತುಪಡಿಸಿ ಸರ್ವೆ ನಂ 62/2 ಮತ್ತು 62/3 ಎಂದು ಹಿಸ್ಸೆಗಳು ಆಗಿರುತ್ತವೆ. ಸರ್ವೆ ನಂ 62 ರಲ್ಲಿ 12 ಎಕರೆ 01 ಗುಂಟೆ ಜಮೀನಿನಲ್ಲಿ ಖರಾಬು ಜಮೀನು 4 ಎಕರೆ ಚಿಲ್ಲರೆ ಗುಂಟೆ ಇತ್ತು. 4 ಎಕರೆ ಚಿಲ್ಲರೆ ಗುಂಟೆ ಖರಾಬು ಜಮೀನು ಯಾವ ಹಿಸ್ಸೆ ಸರ್ವೆ ನಂಬರಿನಲ್ಲಿತ್ತು ನೆನಪಿಲ್ಲ. ಪುಟ್ಟರಂಗಯ್ಯರವರಿಗೆ ಸೇರಿದ ಸರ್ವೆ ನಂ 62/1 ರ 4 ಎಕರೆ 13 ಗುಂಟೆ ಜಮೀನಿನಲ್ಲಿ 1 ಎಕರೆ ಚಿಲ್ಲರೆ ಗುಂಟೆ ಖರಾಬು ಜಮೀನು ಇತ್ತು. ಸರ್ವೆ ನಂ 62/1 ರ 4 ಎಕರೆ 13 ಗುಂಟೆ ಜಮೀನಿನ ಚಕ್ಕುಬಂದಿ ನೆನಪಿಲ್ಲ. ಸರ್ವೆ ನಂ 62/1 4 ಎಕರೆ 13 ಗುಂಟೆ ಜಮೀನಿನಲ್ಲಿ ಪುಟ್ಟರಂಗಯ್ಯರವರು 1 ಎಕರೆ 39 ಗುಂಟೆ ಜಮೀನನ್ನು ಮೆಹಬೂಬಿ ಅಮ್ಮ ಕೋಂ ಅಬ್ದುಲ್ ರೆಹಮಾನ್ ಸಾಬ್‌ರವರಿಗೆ ಮಾರಾಟ ಮಾಡಿರುತ್ತಾರೆ. ಪುಟ್ಟರಂಗಯ್ಯರವರು ಈ ಜಮೀನು ಮೆಹಬೂಬಿ ಅಮ್ಮ ರವರಿಗೆ ಯಾವಾಗ ಮಾರಾಟ ಮಾಡಿರುತ್ತಾರೆ ನೆನಪಿಲ್ಲ. ಮೆಹಬೂಬಿ ಅಮ್ಮ ರವರಿಗೆ ಮಾರಾಟ ಮಾಡಿದ 1 ಎಕರೆ 39 ಗುಂಟೆ ಜಮೀನಿನಲ್ಲಿ ಖರಾಬು ಜಮೀನು ಎಷ್ಟು ಇತ್ತು ಮತ್ತು ಉಳುಮೆ ಎಷ್ಟು ಇತ್ತು ಎಂದರೆ ನೆನಪಿಲ್ಲ ಗೊತ್ತಿಲ್ಲ. ಸದರಿ 1 ಎಕರೆ 39 ಗುಂಟೆ ಜಮೀನಿನ ಚಕ್ಕುಬಂದಿ ನೆನಪಿಲ್ಲ. ಪುಟ್ಟರಂಗಯ್ಯರವರು 1 ಎಕರೆ 39 ಗುಂಟೆ ಜಮೀನನ್ನು ಮೆಹಬೂಬಿ ಅಮ್ಮರವರಿಗೆ ಮಾರಾಟ ಮಾಡಿ ಉಳಿಕೆ ಜಮೀನನ್ನು ಉಳಿಸಿಕೊಂಡಿರುತ್ತಾರೆ. ಪುಟ್ಟರಂಗಯ್ಯರವರು ಮೆಹಬೂಬಿ ಅಮ್ಮರವರಿಗೆ 1946 ರಲ್ಲಿ ಮಾರಾಟ ಮಾಡಿದ ಕ್ರಯಪತ್ರವನ್ನು ನಾನು ನೋಡಿಲ್ಲ. 4 ಎಕರೆ 13 ಗುಂಟೆ ಜಮೀನಿನಲ್ಲಿ 1 ಎಕರೆ 39 ಗುಂಟೆ ಜಮೀನನ್ನು ಮಾರಾಟ ಮಾಡಿ ಪುಟ್ಟರಂಗಯ್ಯರವರು ಯಾವ ದಿಕ್ಕಿನಲ್ಲಿ ಜಮೀನನ್ನು ಉಳಿಸಿಕೊಂಡಿರುತ್ತಾರೆ ನೆನಪಿಲ್ಲ.

15. ಸಾಕ್ಷಿಗೆ ಈಗ ನಿಪಿ 24 ನ್ನು ತೋರಿಸಲಾಗಿ ಅದರಲ್ಲಿ ಪುಟ್ಟರಂಗಯ್ಯರವರು ಯಾವ ದಿಕ್ಕಿನಲ್ಲಿ ಜಮೀನನ್ನು ಉಳಿಸಿಕೊಂಡಿರುತ್ತಾರೆ ಹೇಳಬಹುದಾ ಎಂದರೆ ನಿಪಿ 24 ರ ಬರಹ ಗೊತ್ತಾಗುತ್ತಿಲ್ಲ ಎಂದು

ಹೇಳುತ್ತಾರೆ. ಮೆಹಬೂಬಿ ಅಮ್ಮರವರು 1 ಎಕರೆ 39 ಗುಂಟೆ ಜಮೀನನ್ನು 1959 ರಲ್ಲಿ ಸಯ್ಯದ್ ರಸೂಲ್ ರವರಿಗೆ ಮಾರಾಟ ಮಾಡಿರುತ್ತಾರೆ. ಸಯ್ಯದ್ ರಸೂಲ್ ರವರಿಗೆ ಆದ ಕ್ರಯಪತ್ರವನ್ನು ನಾನು ನೋಡಿಲ್ಲ. ಸಾಕ್ಷಿಗೆ ಈಗ ನಿಪಿ 25 ನ್ನು ತೋರಿಸಲಾಗಿ ಅದು ಸಯ್ಯದ್ ರಸೂಲ್ ರವರಿಗೆ ಆದ ಕ್ರಯಪತ್ರವೇ ನೋಡಿ ಗುರುತಿಸಬಹುದಾ ಎಂದರೆ ಬರವಣಿಗೆ ಓದಲು ಆಗುವುದಿಲ್ಲ ಎಂದು ಹೇಳುತ್ತಾರೆ. ಸಯ್ಯದ್ ರಸೂಲ್ ರವರು ಮೆಹಬೂಬಿ ಅಮ್ಮರವರಿಂದ 1 ಎಕರೆ 39 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು. ಪುಟ್ಟರಂಗಯ್ಯರವರು ಮೆಹಬೂಬಿ ಅಮ್ಮರವರಿಗೆ 1 ಎಕರೆ 39 ಗುಂಟೆ ಜಮೀನನ್ನು ಮಾರಾಟ ಮಾಡಿ ತಾವು ಯಾವುದೇ ಜಮೀನನ್ನು ಉಳಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ.

16. ಸಯ್ಯದ್ ರಸೂಲ್ ರವರು ತಾವು ಖರೀದಿ ಮಾಡಿದ ಜಮೀನಿನಲ್ಲಿ ತಾವು ಹಾಗೂ ತಮ್ಮ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ಸಯ್ಯದ್ ರಸೂಲ್ ಹಾಗೂ ಅವರ ಸಹೋದರರ ಮಧ್ಯೆ ಯಾವಾಗ ವಿಭಾಗ ಆಗಿರುತ್ತದೆ ನೆನಪಿಲ್ಲ, ನಾನು ಆ ವಿಭಾಗ ಪತ್ರವನ್ನು ನೋಡಿಲ್ಲ. ಸಯ್ಯದ್ ರಸೂಲ್ ಹಾಗೂ ಯಾರ ಮಧ್ಯೆ ವಿಭಾಗ ಆಗಿರುತ್ತದೆ ನೆನಪಿಲ್ಲ. ವಿಭಾಗ ಸಯ್ಯದ್ ರಸೂಲ್, ಸಯ್ಯದ್ ಗಾಫರ್, ಸಯ್ಯದ್ ಖಾಸಿಮ್ ಮತ್ತು ನಜ್ಮುನ್ನಿಸಾ ರವರ ಮಧ್ಯೆ ವಿಭಾಗ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ 62/1 ರಲ್ಲಿ ಗಫರ್ ಖಾನ್ ರವರಿಗೆ 18 ಗುಂಟೆ ಜಮೀನು ಭಾಗಕ್ಕೆ ಬಂದಿರುತ್ತದೆ. ಗಫರ್ ಖಾನ್ ರವರ ಭಾಗಕ್ಕೆ ಬಂದ 18 ಗುಂಟೆ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ. ವಿಭಾಗದಲ್ಲಿ ಸಯ್ಯದ್ ರಸೂಲ್, ಸಯ್ಯದ್ ಖಾಸಿಮ್ ಮತ್ತು ನಜ್ಮುನ್ನಿಸಾ ರವರಿಗೆ ಸರ್ವೆ ನಂ 62/1 ರಲ್ಲಿ ಎಷ್ಟು ಜಮೀನು ಭಾಗಕ್ಕೆ ಬಂದಿರುತ್ತದೆ ಗೊತ್ತಿಲ್ಲ. ಸಯ್ಯದ್ ರಸೂಲ್, ಸಯ್ಯದ್ ಖಾಸಿಮ್ ಮತ್ತು ನಜ್ಮುನ್ನಿಸಾರವರಿಗೆ ಭಾಗಕ್ಕೆ ಬಂದ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ನಿಜ. ಸಯ್ಯದ್ ಗಫರ್ ರವರ ಹೆಂಡತಿಯ ಹೆಸರು ನಜ್ಮುನ್ನಿಸಾ ಆಗಿರುತ್ತದೆ. ಸಯ್ಯದ್ ಗಫರ್ ಮತ್ತು ನಜ್ಮುನ್ನಿಸಾರವರ ಮಗನ ಹೆಸರು ಅಲ್ಲಾಭಕ್ಷ್ ಆಗಿರುತ್ತದೆ. ಸಯ್ಯದ್ ಗಫರ್ ರವರು ತೀರಿಕೊಂಡ ನಂತರ ನಜ್ಮುನ್ನಿಸಾ ಮತ್ತು ಅಲ್ಲಾಭಕ್ಷ್ ರವರು ದಿನಾಂಕಃ 01-06-1998 ರಂದು 1 ನೇ ಪ್ರತಿವಾದಿಗೆ ಕ್ರಯಪತ್ರವನ್ನು ಮಾಡಿರುತ್ತಾರೆ. ದಿನಾಂಕಃ 01-06-1998 ರಂದು 1 ನೇ ಪ್ರತಿವಾದಿಗೆ 11 3/4 ಗುಂಟೆ ಜಮೀನನ್ನು ಮಾರಾಟ ಮಾಡಲಾಯಿತು. 1 ನೇ ಪ್ರತಿವಾದಿಗೆ ಆದ ಕ್ರಯಪತ್ರವನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿಗೆ ಮಾರಾಟವಾದ 11 3/4 ಗುಂಟೆ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ.

17. ದಿನಾಂಕಃ 01-06-1998 ರಂದು ನಜ್ಮುನ್ನಿಸಾ ಹಾಗೂ ಅಲ್ಲಾಭಕ್ಷ್ ರವರಿಗೆ ಸರ್ವೆ ನಂ 62/1 ರಲ್ಲಿ 18 ಗುಂಟೆ ಜಮೀನಿಗೆ ಒಡೆತನವಿತ್ತು. ನಜ್ಮುನ್ನಿಸಾ ಹಾಗೂ ಅಲ್ಲಾಭಕ್ಷ್ ರವರು 1 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿ ತಾವು ಉಳಿಕೆ ಜಮೀನನ್ನು ಉಳಿಸಿಕೊಂಡಿರುತ್ತಾರೆ. ನಜ್ಮುನ್ನಿಸಾ ಹಾಗೂ ಅಲ್ಲಾಭಕ್ಷ್ ರವರು ಸರ್ವೆ ನಂ 62/1 ರ ಯಾವ ದಿಕ್ಕಿನಲ್ಲಿ ಜಮೀನನ್ನು ಉಳಿಸಿಕೊಂಡಿರುತ್ತಾರೆ ನೆನಪಿಲ್ಲ.

ಸಾಕ್ಷಿಗೆ ಈಗ ನಿಪಿ27 ನ್ನು ತೋರಿಸಲಾಗಿ ಅದರಲ್ಲಿ ನಜ್ಮುನ್ನಿಸಾ ಹಾಗೂ ಅಲ್ಲಾಭಕ್ಷ್ ರವರು ಜಮೀನನ್ನು ಉಳಿಸಿಕೊಂಡಿರುವ ಬಗ್ಗೆ ಬರೆದಿರುವುದಿಲ್ಲ. ನಾನು 1 ನೇ ಪ್ರತಿವಾದಿಯನ್ನು ನೋಡಿದ್ದು ಅವರ ಪರಿಚಯವಿದೆ. ನಾನು 2 ನೇ ಪ್ರತಿವಾದಿಯನ್ನು ನೋಡಿಲ್ಲ. 2005 ರಲ್ಲಿ ನಜ್ಮುನ್ನಿಸಾ ಹಾಗೂ ಅಲ್ಲಾಭಕ್ಷ್ ರವರು ಸರ್ವೆ ನಂ 62/1 ರಲ್ಲಿ 1 ಎಕರೆ 12 ಗುಂಟೆ ಜಮೀನಿಗೆ 3 ನೇ ಪ್ರತಿವಾದಿಯ ಜೊತೆ ಒಂದು ಒಪ್ಪಂದ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ 16-05-2007 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ 8 ಗುಂಟೆ ಜಮೀನನ್ನು ಮಾರಾಟ ಮಾಡುವ ಬಗ್ಗೆ ಒಂದು ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ 8 ಗುಂಟೆ ಜಮೀನಿಗೆ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ ಒಂದು ಮುಕ್ತರುನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಸರ್ವೆ ನಂ 62/1 ರಲ್ಲಿ 9 3/4 ಗುಂಟೆ ಜಮೀನನ್ನು ಮಾರಾಟ ಮಾಡುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. 9 3/4 ಗುಂಟೆ ಜಮೀನು ಮಾರಾಟಕ್ಕಿದೆ ಎಂದು ಗೊತ್ತಾದ ನಂತರ ವಾದಿ 1 ರಿಂದ 3 ನೇ ಪ್ರತಿವಾದಿಗಳನ್ನು ಸಂಪರ್ಕಿಸಿದ್ದರು ಎಂದರೆ ಸರಿಯಲ್ಲ. ನಂತರ 1 ರಿಂದ 3 ನೇ ಪ್ರತಿವಾದಿಗಳು ಹಾಗೂ ವಾದಿಯ ಮಧ್ಯೆ ದಿನಾಂಕಃ 08-12-2007 ರಂದು ಕ್ರಯದ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ.

18. ನಿಡಿ12 ನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ನೆನಪಿಲ್ಲ. ಸಾಕ್ಷಿಗೆ ಈಗ ನಿಡಿ 12 ನ್ನು ತೋರಿಸಲಾಗಿ ಅದರಲ್ಲಿರುವ ಸರ್ವೆ ನಂ 62/1 ಎ ರ 9 3/4 ಗುಂಟೆ ಜಮೀನಿನ ಚಕ್ಕುಬಂದಿ ಮತ್ತು ದಾವಾ ಆಸ್ತಿಯ ಚಕ್ಕುಬಂದಿ ಒಂದೇಯಾಗಿರುತ್ತದೆ ಎಂದರೆ ನಿಜ. ನಿಡಿ12 ರಲ್ಲಿರುವ ವಿಷಯವನ್ನು ನಾನು ಓದಿ ತಿಳಿದುಕೊಂಡಿಲ್ಲ. ನಿಡಿ12 ರಲ್ಲಿ 1 ಮತ್ತು 3 ನೇ ಪ್ರತಿವಾದಿಯ ಸಹಿಗಳು ಇರುತ್ತವೆ ಸರಿಯಲ್ಲ, ಅವುಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ12 ನ್ನು ವಾದಿ ನೋಟಿಸ್ ಮೂಲಕ ನನಗೆ ಕಳುಹಿಸಿದ್ದರು ಅದನ್ನು ಹಾಜರುಪಡಿಸಿರುತ್ತೇನೆ. ನನಗೆ ನಿಡಿ12 ನೋಟಿಸ್ ಮೂಲಕ ಬಂದು ಇಲ್ಲಿಗೆ 15 ವರ್ಷ ಆಗಿರುತ್ತದೆ. ನಿಡಿ12 ರಲ್ಲಿ 10 ಲಕ್ಷ ರೂಗಳಿಗೆ 1 ಮತ್ತು 3 ನೇ ಪ್ರತಿವಾದಿ ವಾದಿಗೆ ಜಮೀನುಗಳನ್ನು ಬರೆದುಕೊಟ್ಟಿರುತ್ತಾರೆಂದು ಬರವಣಿಗೆ ಇದೆ ಎಂದರೆ ಸರಿಯಲ್ಲ. ವಾದಿ ನಿಡಿ12 ರ ಆಧಾರದ ಮೇರೆಗೆ ಕ್ರಯಪತ್ರ ಬರೆದುಕೊಡುತ್ತಿಲ್ಲವೆಂದು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಒ ಎಸ್ 363/2012 ನ್ನು ಹೂಡಿದ್ದರು ಎಂದರೆ ಸರಿಯಲ್ಲ. ಒ ಎಸ್ ನಂ363/2012 ರ ಬಗ್ಗೆ ನನಗೆ ನೋಟಿಸ್ ಬಂದಾಗ ಗೊತ್ತಾಗಿರುತ್ತದೆ. ಒ ಎಸ್ ನಂ 363/2012 ನ್ನು ದಿನಾಂಕಃ 29-03-2014 ರಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ದಾವೆ ಡಿಕ್ರಿಯಾದರೂ ಸಹ ಕ್ರಯಪತ್ರವನ್ನು ಬರೆದುಕೊಡಲಿಲ್ಲವಾದ್ದರಿಂದ ವಾದಿ ಇ ಎಕ್ಸ್ ನಂ 51/14 ನ್ನು ಹೂಡಿ ನ್ಯಾಯಾಲಯದ ಮೂಲಕ ದಿನಾಂಕಃ 24-06-2016 ರಂದು ಕ್ರಯಪತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರವಾದರೂ ಸಹ 1

ರಿಂದ 3 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಬಿಟ್ಟುಕೊಡಲಿಲ್ಲವಾದ್ದರಿಂದ ದಿನಾಂಕಃ 08-08-2016 ರಂದು ವಾದಿ ನ್ಯಾಯಾಲಯದ ಮೂಲಕ ದಾವಾ ಆಸ್ತಿಯ ಸ್ವಾಧೀನತೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

19. ಸರ್ವೆ ನಂ 62/1 ಎ ರಲ್ಲಿ ನನಗೆ 9 3/4 ಗುಂಟೆ ಜಮೀನಿಗೆ ಒಡೆತನವಿರುತ್ತದೆ. ನಾನು ಸದರಿ ಜಮೀನನ್ನು 1 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಂದೆಗೆ ಕ್ರಯದ ಕರಾರು ಪತ್ರವನ್ನು ದಿನಾಂಕಃ 17-10-2007 ರಂದು ಬರೆದುಕೊಟ್ಟಿದ್ದರು. ನನ್ನ ತಂದೆಯ ಹೆಸರು ಸಯ್ಯದ್ ಜಲೀಲ್ ಉರುಫ್ ಅನ್ವರ್ ಸಾಬ್ ಆಗಿರುತ್ತದೆ. ನನ್ನ ತಂದೆಯವರು ದಿನಾಂಕಃ 02-08-2017 ರಂದು ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಆದ ಕ್ರಯದ ಕರಾರು ಪತ್ರದ ಪ್ರತಿ ನನ್ನ ಕಡೆ ಇರುತ್ತದೆ. ನನ್ನ ತಂದೆಗೆ 7 ಲಕ್ಷದ 50 ಸಾವಿರ ರೂಗಳಿಗೆ ಕ್ರಯದ ಕರಾರು ಪತ್ರ ಆಗಿರುತ್ತದೆ. ದಿನಾಂಕಃ 17-10-2007 ರಂದು ನನ್ನ ತಂದೆ 1 ನೇ ಪ್ರತಿವಾದಿಗೆ 5 ಲಕ್ಷ ರೂ ಹಣವನ್ನು ಕೊಟ್ಟಿದ್ದರು. ದಿನಾಂಕಃ 17-10-2007 ರಂದು ನನ್ನ ತಂದೆ 1 ನೇ ಪ್ರತಿವಾದಿಗೆ 5 ಲಕ್ಷ ರೂ ಹಣ ಕೊಟ್ಟಿದ್ದಾರೆ ಎಂದು ಹೇಳುವ ಬಗ್ಗೆ ಕ್ರಯದ ಕರಾರು ಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇವೆಯಾ ಎಂದರೆ ಸಾಕ್ಷಿದಾರರು ಇದ್ದಾರೆ ಎಂದು ಹೇಳುತ್ತಾರೆ. ದಿನಾಂಕಃ 17-10-2007 ರಂದು ನನ್ನ ತಂದೆ 1 ನೇ ಪ್ರತಿವಾದಿಗೆ 5 ಲಕ್ಷ ರೂ ಹಣವನ್ನು ಕೊಟ್ಟಿದ್ದರು. 5 ಲಕ್ಷ ರೂ ಹಣವನ್ನು 1 ನೇ ಪ್ರತಿವಾದಿಗೆ ಕೊಡುವಾಗ ಸಾಕ್ಷಿದಾರರಾದ ಮಂಜೇಶ ಹಾಗೂ ಸಯ್ಯದ್ ರಿಯಾಸ್ ರವರು ಇದ್ದರು. ನಾನು ಮಂಜೇಶ ಹಾಗೂ ಸಯ್ಯದ್ ರಿಯಾಸ್ ರವರನ್ನು ಸಾಕ್ಷಿ ವಿಚಾರಣೆ ಮಾಡಿಸಬಹುದು. 5 ಲಕ್ಷ ರೂ ಹಣವನ್ನು 1 ನೇ ಪ್ರತಿವಾದಿ ಪಡೆದು ನಮಗೆ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ಸಾಕ್ಷಿ ಮುಂದುವರೆದು ನ್ಯಾಯಾಲಯದ ಮೂಲಕ ಕ್ರಯಪತ್ರವಾಗಿರುತ್ತದೆ ಎಂದು ಹೇಳುತ್ತಾರೆ. ಯಾವ ಕಾರಣಕ್ಕಾಗಿ 1 ನೇ ಪ್ರತಿವಾದಿ ಕ್ರಯಪತ್ರ ಬರೆದುಕೊಡಲಿಲ್ಲ ಎಂದರೆ 1 ನೇ ಪ್ರತಿವಾದಿ ಬರಲಿಲ್ಲ ಒಂದಲ್ಲಾ ಕಾರಣ ಹೇಳುತ್ತಿದ್ದರು ಎಂದು ಹೇಳುತ್ತಾರೆ. ನಂತರ ನಾವು 1 ನೇ ಪ್ರತಿವಾದಿಗೆ ಒಂದು ನೋಟಿಸನ್ನು ದಿನಾಂಕಃ 11-01-2013 ರಂದು ಕಳುಹಿಸಿದ್ದೆವು. ನಾವು ಕಳುಹಿಸಿದ ನೋಟಿಸ್ 1 ನೇ ಪ್ರತಿವಾದಿಗೆ ಜಾರಿಯಾಗಲಿಲ್ಲ. 1 ನೇ ಪ್ರತಿವಾದಿ ನೋಟಿಸನ್ನು ತೆಗೆದುಕೊಳ್ಳಲಿಲ್ಲವೆಂದು ವಾಪಸ್ಸು ಬಂದಿರುತ್ತದೆ. ನಂತರ ದಿನಾಂಕಃ 07-02-2013 ರಂದು ನಾವು 1 ನೇ ಪ್ರತಿವಾದಿಯ ವಿರುದ್ದ ಒಂದು ದಾವೆಯನ್ನು ಹೂಡಿದ್ದೆವು. ನಾವು ದಾವೆ ಹೂಡುವ ಮೊದಲೇ ವಾದಿ 1 ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಆದ ಕ್ರಯದ ಕರಾರು ಪತ್ರದಲ್ಲಿ ವಾಯಿದೆ ಎಷ್ಟು ನಿಗಧಿಯಾಗಿತ್ತು ನೆನಪಿಲ್ಲ ಆದರೆ ತಕ್ಷಣ ಬಂದು ಕ್ರಯಪತ್ರ ಮಾಡಿಕೊಡುವುದಾಗಿ ಹೇಳಿದ್ದರು ಎಂದು ಹೇಳುತ್ತಾರೆ. ನಿಪಿ18 ನ್ನು ಯಾರು ಬರೆದಿರುತ್ತಾರೆ ನೆನಪಿಲ್ಲ. 1 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ವಿಚಾರಣೆ ಮಾಡಬಹುದಾ ಎಂದರೆ ಅವರು ಎಲ್ಲಿ

ಇರುತ್ತಾರೆ ಗೊತ್ತಿಲ್ಲ ಅವರು ಊರು ಬಿಟ್ಟು ತುಂಬಾ ವರ್ಷ ಆಗಿರುತ್ತದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಊರು ಬಿಟ್ಟು 15-20 ವರ್ಷ ಆಗಿರಬಹುದಾ ಎಂದರೆ ನಿಪಿ 18 ಆದ 1-2 ತಿಂಗಳಿಗೆ 1 ನೇ ಪ್ರತಿವಾದಿ ಊರುಬಿಟ್ಟು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಅಂದರೆ ನವೆಂಬರ್ ಡಿಸೆಂಬರ್ 2007 ರಿಂದ 1 ನೇ ಪ್ರತಿವಾದಿ ಎಲ್ಲಿ ಇರುತ್ತಾರೆ ನಮಗೆ ಗೊತ್ತಿಲ್ಲ ಮತ್ತು ಅವರು ನಮ್ಮ ಊರಿನಲ್ಲಿರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಬೆಂಗಳೂರಿನ ನಾಗವಾರದಲ್ಲಿ 1 ನೇ ಪ್ರತಿವಾದಿ ಇರುವುದಾಗಿ ಗೊತ್ತಾದ ನಂತರ ಅವರಿಗೆ ನೋಟಿಸ್ ಕಳುಹಿಸಿರುತ್ತೇವೆ ಅದು ವಾಪಸ್ಸು ಬಂದಿರುತ್ತದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಊರು ಬಿಟ್ಟು ಹೋದ ನಮಗೆ ಗೊತ್ತಿರಲಿಲ್ಲ. 1 ನೇ ಪ್ರತಿವಾದಿ ಊರು ಬಿಟ್ಟು ಹೋಗಿದ್ದು ನನಗೆ ನೋಟಿಸ್ ಬಂದ ನಂತರ ಗೊತ್ತಾಗಿರುತ್ತದೆ. ಒ ಎಸ್ ನಂ 82/2013 ನ್ನು ಹೂಡುವ ಮೊದಲು 1 ನೇ ಪ್ರತಿವಾದಿ ಊರಿನಲ್ಲಿರುವುದಿಲ್ಲವೆಂದು ನಮಗೆ ಗೊತ್ತಿತ್ತು. ಒ ಎಸ್ ನಂ 82/2013 ರ ವಾದಪತ್ರದಲ್ಲಿ 1 ನೇ ಪ್ರತಿವಾದಿಯ ವಿಳಾಸವನ್ನು ಬೆಂಗಳೂರಿನ ನಾಗವಾರದ ವಿಳಾಸ ತೋರಿಸಿರುತ್ತೇವೆ. ಸಾಕ್ಷಿಗೆ ಈಗ ನಿಪಿ19 ನ್ನು ತೋರಿಸಲಾಗಿ ಅದರಲ್ಲಿ 1 ನೇ ಪ್ರತಿವಾದಿಯ ಬೆಂಗಳೂರಿನ ನಾಗವಾರದ ವಿಳಾಸವನ್ನು ತೋರಿಸಿರುವುದಿಲ್ಲ ಎಂದು ಹೇಳುತ್ತಾರೆ.

20. ಒ ಎಸ್ ನಂ 82/13 ನ್ನು ಹೂಡುವ ಮೊದಲು 1 ನೇ ಪ್ರತಿವಾದಿ ನಮಗೆ ಕ್ರಯಪತ್ರವನ್ನು ಬರೆದುಕೊಡುವುದಿಲ್ಲವೆಂದು ಹೇಳಿರಲಿಲ್ಲ. ಆದ ಕಾರಣ ಆ ದಾವೆಯನ್ನು ಹೂಡುವ ಅವಶ್ಯಕತೆ ಏನು ಇತ್ತು ಎಂದರೆ ನಾವು ಕರೆದರೂ ಸಹ 1 ನೇ ಪ್ರತಿವಾದಿ ಕ್ರಯಪತ್ರವನ್ನು ಮಾಡಿಕೊಡಲು ಬಂದಿರುವುದಿಲ್ಲ ಒಂದಲ್ಲಾ ಒಂದು ಕಾರಣ ಹೇಳುತ್ತಿದ್ದರು ಎಂದು ಹೇಳುತ್ತಾರೆ. ನಿಪಿ18 ಆದಾಗಿನಿಂದ ದಿನಾಂಕಃ 11-01-2013 ರವರಿಗೆ 1 ನೇ ಪ್ರತಿವಾದಿ ಕ್ರಯಪತ್ರ ಬರೆದುಕೊಡುತ್ತಿಲ್ಲವೆಂದು ಏನಾದರೂ ಕ್ರಮತೆಗೆದುಕೊಂಡಿದ್ದೀರಾ ಎಂದರೆ 1 ನೇ ಪ್ರತಿವಾದಿಯನ್ನು ಕೇಳುತ್ತಿದ್ದೆವು ಎಂದು ಹೇಳುತ್ತಾರೆ.

21. ನಿಪಿ18 ನ್ನು ಬರೆಯಲು ಛಾಪಾ ಕಾಗದ ಯಾರು ತಂದಿರುತ್ತಾರೆ ಗೊತ್ತಿಲ್ಲ. ನಿಪಿ18 ನ್ನು ಯಾರು ಬರೆದಿರುತ್ತಾರೆ ಗೊತ್ತಿಲ್ಲ. ನಿಪಿ18 ರಲ್ಲಿ ಏನು ಬರೆಯಲಾಗಿದೆ ನನಗೆ ನೆನಪಿಲ್ಲ. ದಿನಾಂಕಃ 06-01-2017 ರಂದು ನನ್ನ ತಂದೆಗೆ ನ್ಯಾಯಾಲಯದ ಮೂಲಕ ಕ್ರಯಪತ್ರವಾಗಿರುತ್ತದೆ. ದಿನಾಂಕಃ 24-06-2016 ರಂದು ವಾದಿಗೆ ಕ್ರಯಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮದೆಂದು ನಾವು ದಿನಾಂಕಃ 06-01-2017 ರ ಕ್ರಯಪತ್ರದ ಆಧಾರದ ಮೇರೆಗೆ ಕೇಳುತ್ತಿದ್ದೇವೆ. ನನ್ನ ತಂದೆಯ ಹೆಸರಿಗೆ ಕ್ರಯಪತ್ರ ಆಗುವ ಮೊದಲೇ ವಾದಿಯ ಹೆಸರಿಗೆ ನ್ಯಾಯಾಲಯದ ಮೂಲಕ ದಿನಾಂಕಃ 24-06-2016 ರಂದು ಕ್ರಯಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಿನಾಂಕಃ 08-08-2016 ರಂದು ದಾವಾ ಆಸ್ತಿಯ ಸ್ವಾಧೀನತೆಯನ್ನು ಇ ಎಕ್ಸ್ ನಂ 51/2014 ರಲ್ಲಿ ಕೊಡಿಸಿಕೊಟ್ಟಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅಥವಾ ನ್ಯಾಯಾಲಯ ನನಗೆ ದಾವಾ ಆಸ್ತಿಯ ಸ್ವಾಧೀನತೆಯನ್ನು ಕೊಡಿಸಿಕೊಟ್ಟಿರುತ್ತಾರಾ

ಎಂದರೆ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 18 ಆದ ದಿನವೇ ದಾವಾ ಆಸ್ತಿಯ ಸ್ವಾಧೀನತೆಯನ್ನು ನಮಗೆ ಬಿಟ್ಟುಕೊಟ್ಟಿದ್ದರು. ಸಾಕ್ಷಿಗೆ ನಿಪಿ 18 ನ್ನು ತೋರಿಸಲಾಗಿ ಅದರಲ್ಲಿ ದಾವಾ ಆಸ್ತಿಯಸ್ವಾಧೀನತೆಯನ್ನು ಬಿಟ್ಟುಕೊಟ್ಟ ಬಗ್ಗೆ ಬರೆದಿರುವುದಿಲ್ಲ ಎಂದು ಹೇಳುತ್ತಾರೆ. ಈ ನ್ಯಾಯಾಲಯ ಅಧಿಕಾರಗಳನ್ನು ಕಳುಹಿಸಿ ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಕೊಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮೂಲಕ ಕ್ರಯಪತ್ರವನ್ನು ಬರೆಸಿಕೊಳ್ಳುವಾಗ ನಾನು ನ್ಯಾಯಾಲಯಕ್ಕೆ 2007 ರಿಂದ 2017 ರ ದಾವಾ ಆಸ್ತಿಯ ಇ ಸಿ ಯನ್ನು ಸಲ್ಲಿಸಿರುವುದಿಲ್ಲ. ನಾನು ಇ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರೆ ನ್ಯಾಯಾಲಯ ನನ್ನ ತಂದೆಯ ಹೆಸರಿಗೆ ಕ್ರಯಪತ್ರ ಬರೆಸಿಕೊಡುತ್ತಿರಲಿಲ್ಲ ಎಂದರೆ ಆಗ ನನ್ನ ತಂದೆ ಇದ್ದರು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಸತ್ಯವನ್ನು ಮರೆಮಾಚಿ ನ್ಯಾಯಾಲಯಕ್ಕೆ ಮೋಸ ಮಾಡಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಕ್ರಯಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಮಾಲೀಕರು ಹಾಗೂ ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ. ವಾದಿಯೇ ದಾವಾ ಆಸ್ತಿಯ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 08-08-2016 ರಿಂದ ವಾದಿಯೇ ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

22. ನಿಪಿ18 ಆದ ದಿನಾಂಕದಿಂದ ದಿನಾಂಕಃ 07-02-2013 ರವರೆಗೆ ನಿಪಿ 18 ಹಾಗೂ ಸಾಕ್ಷಿದಾರರನ್ನು ಬಿಟ್ಟು ನಿಪಿ 18 ಆದ ಬಗ್ಗೆ ಬೇರೆ ಯಾವುದೇ ಆಧಾರವಿರುವುದಿಲ್ಲ. ನಿಪಿ18 ನ್ನು ಯಾವುದೇ ಕಛೇರಿಯಲ್ಲಿ ಅಥವಾ ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಗ್ಗೆ ನನಗೆ ನೆನಪಿಲ್ಲ ನನ್ನ ತಂದೆಗೆ ಗೊತ್ತು. ದಿನಾಂಕಃ 24-06-2016 ಮತ್ತು ದಿನಾಂಕಃ 08-08-2016 ರ ನಂತರ ದಾವಾ ಆಸ್ತಿಯ ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯ ಮ್ಯುಟೇಷನ್ ಹಾಗೂ ಖಾತೆ ವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ ಅದನ್ನು ಸುಳ್ಳು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಖಾತೆ ಮತ್ತು ಪಹಣಿ ನಮ್ಮ ಹೆಸರಿಗೆ ಆಗಿರುವುದಿಲ್ಲ. ದಾವಾ ಆಸ್ತಿಗೆ ನಾವು ಕಂದಾಯ ಕಟ್ಟಿಲ್ಲ.

23. ದಿನಾಂಕಃ 01-08-2017 ರಲ್ಲಿ ನಮಗೂ ಹಾಗೂ ವಾದಿಗೆ ದಾವಾ ಆಸ್ತಿಯ ಬಗ್ಗೆ ಗಲಾಟೆಯಾಗಿರುತ್ತದೆ ಪೋಲಿಸರು ಬಂದಿದ್ದರು ಎಂದರೆ ಗಲಾಟೆ ದಾವಾ ಆಸ್ತಿಯ ಬಗ್ಗೆ ಆಗಿರಲಿಲ್ಲ ಪಕ್ಕದ ಆಸ್ತಿಯ ಬಗ್ಗೆ ಆಗಿತ್ತು ಆಗ ನಾನು ಇರಲಿಲ್ಲ ಎಂದು ಹೇಳುತ್ತಾರೆ. ನಾವು ದಾವಾ ಆಸ್ತಿಯ ಮಾಲೀಕರು ಹಾಗೂ ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.